# <u>ಇವಗೇಕೆ ಶೃಂಗಾರ ಇವಗೇಕೆ ಭಂಗಾರ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 76
2. **Note:** This kruti is not available in other standard reference books.

ರಾಗ: ಸಾರಂಗ                    ತಾಳ: ತ್ರಿಪುಟ

ಇವಗೇಕೆ ಶೃಂಗಾರ ಇವಗೇಕೆ ಭಂಗಾರ    || ಪ ||
ಕಾಡ ಕರಡಿಯಂತೆ ಪೋಲುವ ದೇಹಕ್ಕೆ    || ಅಪ ||

ನೀರೊಳಗೆ ಮುಳುಗಿದವಗೆ ಪರಿಮಳ ಗಂಧವೇಕೆ
ಭಾರ ಪೊತ್ತವಗೆ ಪನ್ನೀರು ಏಕೆ
ಕೋರೆ ದಾಡೆಯ ಘೋರ ಮುಖಗೇಕೆ ಕನ್ನಡಿ
ಕರುಳ ಹಾರ ಧರಿಸಿದವಗೆ ಹಾರ ಪದಕವೇಕೆ    || 1 ||

ನೆಲವನಳೆದವಗೆ ಕಾಲ ಕಿರುಗೆಜ್ಜೆ ಏಕೆ
ತಲೆ ತಾಯ ತರಿದವಗೆ ಮರಿಯಾದೆಯೇಕೆ
ಚೇಲಾರುವೆಯ ಉಟ್ಟವಗೇಕೆ ಪೀತಾಂಬರ
ಪಾಲ ಕದ್ದು ಕುಡಿದವಗೆ ಕುಸುಮ ಕೇಸರಿಯೇಕೆ    || 2 ||

ಬತ್ತಲೆ ನಿಂತಿದ್ದವಗೆ ಕಸ್ತೂರಿ ತಿಲಕವೇಕೆ
ಉತ್ತಮ ಹಯವನೇರಿದವಗೆ ಪುಷ್ಪಕವೇಕೆ
ಚಿತ್ತಜನಯ್ಯ ಶ್ರೀ ಪುರಂದರ ವಿಠ್ಠಲ
ಭಕ್ತರ ಸಲಹುವಗೆ ಬಹಿರಂಗದಾಭರಣವೇಕೆ    || 3 ||

**Classification:** Keerthane
**Ankita:** sri purandara vittala
**Location:** NA
**Category:** Dashavatara

**Sub-Category:** bangara, dashavatara, deha, karadi, niru, gandha, kannadi, gejje, tayi, halu, kalla, Kasturi, kudure, abharana,

**Pravachana:** NA

**Explanation:** NA